**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ125/2018 ಡಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ 25.01.2024 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿ ಪರ ಶ್ರೀ **ಎಂ.ಡಿ** ವಕೀಲರಿಂದಃ

ಈ ದಾವೆಯ ವಾದಿಗಳು ಹಾಗೂ 1 ನೇ ಪ್ರತಿವಾದಿ ನನಗೆ ಪರಿಚಯ ಇರುತ್ತಾರೆ ಎಂದರೆ ಸರಿ. 1 ನೇ ವಾದಿಯ ಮಾವ ಹಾಗೂ 2 ರಿಂದ 4 ನೇ ವಾದಿಗಳ ತಾತ ಮಂಚಿಗಯ್ಯ ಅಲಿಯಾಸ್ ಮಂಚಿಗೌಡ ಮೂಲತಃ ಚಾಮನಹಳ್ಳಿ ಗ್ರಾಮದವರು ಎಂದರೆ ಸರಿ. ಸದರಿ ಮಂಚಿಗೌಡರವರಿಗೆ ಡೊಳ್ಳೇಗೌಡ, ಸಣ್ಣೇಗೌಡ, ಮಂಚಿಗಯ್ಯ, ಮರಿಗೌಡ ಮತ್ತು ಕೆಂಪೇಗೌಡ ಎಂದು ಮಕ್ಕಳು ಇರುತ್ತಾರೆ ಎಂದರೆ ಸರಿ. ನಾನು ವಾಸ ಮಾಡುತ್ತಿರುವ ಮನೆಯ ಪೂರ್ವ ದಿಕ್ಕಿನಲ್ಲಿ ವಾದಿಗಳು ವಾಸ ಮಾಡುತ್ತಿರುವ ಎರಡು 4 ಕಂಬಗಳ ಮಂಗಳೂರು ಹಂಚಿನ ತೊಟ್ಟಿ ಮನೆಗಳು ಇರುತ್ತವೆ ಎಂದರೆ ಸರಿ. ಸದರಿ ಮನೆಗಳನ್ನು ದಿನಾಂಕ 30.05.1961 ರಂದು ಕ್ರಯಪತ್ರದಡಿ ಮಂಚಿಗಯ್ಯರವರು ಖರೀದಿಸಿರುವ ಆಸ್ತಿಗಳಲ್ಲಿ ಕಟ್ಟಿರುವ ಮನೆಗಳಾಗಿರುತ್ತವೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಮನೆಗಳಲ್ಲಿ ಡೊಳ್ಳೇಗೌಡ ಮತ್ತು ಅವರ ಸಹೋದರರು ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರಸ್ತುತ ಸದರಿ ಮನೆಯಲ್ಲಿ ಯಾರು ವಾಸ ಮಾಡುತ್ತಿದ್ದಾರೆ ಹಾಗೂ ಖಾತೆ ಯಾರ ಹೆಸರಿನಲ್ಲಿ ಇರುತ್ತದೆ ಎನ್ನುವುದು ನನಗೆ ಗೊತ್ತಿರುವುದಿಲ್ಲ.

ನಾನು 2 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಹಾಗೂ ಬರೆಯಲು ಬರುವುದಿಲ್ಲ. ನಾನು ಸಹಿ ಮಾತ್ರ ಮಾಡುತ್ತೇನೆ. ಪ್ರಸ್ತುತ 1 ನೇ ವಾದಿ, 3 ಮತ್ತು 4 ನೇ ವಾದಿಗಳ ಕುಟುಂಬ ಸದರಿ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ಮನೆಗಳ ಪೂರ್ವ ದಿಕ್ಕಿನಲ್ಲಿರುವ ಮನೆಯಲ್ಲಿ 4 ನೇ ಪ್ರತಿವಾದಿ ತಂದೆ ಮರಿಗೌಡ ಮತ್ತು ಅವರು ಕುಟುಂಬದವರು ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಮಧ್ಯಭಾಗದಲ್ಲಿ ಡೊಳ್ಳೇಗೌಡ ಮತ್ತು ಅವರ ಕುಟುಂಬದವರು ವಾಸ

ಮಾಡುತ್ತಿದ್ದಾರೆ ಎಂದರೆ ಸರಿ. ಪಶ್ಚಿಮ ದಿಕ್ಕಿನಲ್ಲಿರುವ ಮನೆಯಲ್ಲಿ 1 ನೇ ವಾದಿ ಹಾಗೂ ಅವರ ಕುಟುಂಬದವರು ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ಮನೆಗಳನ್ನು ಮಂಚಿಗಯ್ಯ ಅಲಿಯಾಸ್ ಮಂಚೀಗೌಡರವರು ತಮ್ಮ ಜೀವಿತಾವಧಿಯಲ್ಲಿ ಕಟ್ಟಿಸಿರುತ್ತಾರೆ ಎಂದರೆ ಸರಿ.

ಮಂಚಿಗಯ್ಯರವರು ದಿನಾಂಕ 30.05.1961 ರ ಕ್ರಯಪತ್ರವನ್ನು ಬೆಂಗಳೂರಿನಲ್ಲಿ ವಾಸವಾಗಿರುವ ಮಾದೇಗೌಡರವರ ಮಕ್ಕಳು ಪುಟ್ಟಪ್ಪರವರಿಂದ ಕ್ರಯಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಕ್ರಯಪತ್ರದಡಿಯಲ್ಲಿ ಮಂಚಿಗಯ್ಯರವರು ಪೂರ್ವ ಪಶ್ಚಿಮ 93 ಅಡಿ ಹಾಗೂ ಉತ್ತರ ದಕ್ಷಿಣ 43 ½ ಅಡಿ ವಿಸ್ತೀರ್ಣ ಜಾಗವನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗಳ ಉತ್ತರ ಹಾಗೂ ದಕ್ಷಿಣ ದಿಕ್ಕಿನಲ್ಲಿ ರಸ್ತೆ ಇರುತ್ತದೆ ಎಂದರೆ ಸರಿ. ದಕ್ಷಿಣ ದಿಕ್ಕಿನಲ್ಲಿ ಇರುವ ರಸ್ತೆಗೆ ಹೊಂದಿಕೊಂಡಂತೆ ಇರುವ ಚರಂಡಿಯನ್ನು ವಾದಿಗಳಿಗೆ ಸೇರಿದ 1 ½ ಅಡಿ ಜಾಗವನ್ನು ಉಪಯೋಗಿಸಿಕೊಂಡು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆದಕಾರಣ ಸದರಿ ಆಸ್ತಿಯ ಖಾತೆಯು ಬನ್ನೂರು ಪುರಸಭೆಯಲ್ಲಿ ಉತ್ತರ ದಕ್ಷಿಣ 40 ಅಡಿ ಮಾತ್ರ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿಗಳು ವಾಸ ಇರುವ ಮನೆಗಳ ಖಾತೆಯು ಸದರಿಯವರ ಹೆಸರಿನಲ್ಲಿ ಪ್ರತ್ಯೇಕವಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಮಂಚಿಗಯ್ಯರವರು ಮನೆಗಳನ್ನು ಕಟ್ಟುವ ಸಮಯದಲ್ಲಿ ಸದರಿ ಮನೆಯ ಪೂರ್ವ ದಿಕ್ಕಿನಲ್ಲಿ ಪೂರ್ವ ಪಶ್ಚಿಮ 9 ಅಡಿ, ಉತ್ತರ ದಕ್ಷಿಣ 42 ಅಡಿ ಜಾಗವನ್ನು ಬಿಟ್ಟು ಮನೆಗಳನ್ನು ಕಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಖಾಲಿ ಜಾಗದ ಖಾತೆಯು 1 ನೇ ವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ಸದರಿ ಮನೆಗಳ ಪಶ್ಚಿಮ ದಿಕ್ಕಿನಲ್ಲಿ ಪೂರ್ವ ಪಶ್ಚಿಮ 9 ಅಡಿ, ಉತ್ತರ ದಕ್ಷಿಣ 42 ಅಡಿ ಜಾಗವನ್ನು ಉಳಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಪೂರ್ವ ಮತ್ತು ಪಶ್ಚಿಮ ದಿಕ್ಕಿನಲ್ಲಿ ಬಿಟ್ಟಿರುವ ಖಾಲಿ ಜಾಗ ಹಾಗೂ ಎರಡು ಮನೆಗಳ ಒಟ್ಟು ವಿಸ್ತೀರ್ಣ 93 ಅಡಿ ಇರುತ್ತದೆ ಎಂದರೆ ಸರಿಯಲ್ಲ. ವಾದಿಗಳು ಪಶ್ಚಿಮ ದಿಕ್ಕಿನಲ್ಲಿ ಬಿಟ್ಟುಕೊಂಡಿರುವ 9 **X** 42 ಅಡಿಗಳ ವಿಸ್ತೀರ್ಣಕ್ಕೆ ಈ ದಾವೆಯನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಸ್ತೀರ್ಣದ ಆಸ್ತಿ

ಅಂದರೆ ಈ ದಾವಾ ಆಸ್ತಿಯನ್ನು ನಾವು ಹಾಗೂ 1 ನೇ ಪ್ರತಿವಾದಿ ಒತ್ತುವರಿ ಮಾಡಿಕೊಂಡು ಹೊಸಾರು ಕಟ್ಟಿರುತ್ತೇವೆ ಎಂದರೆ ಸರಿಯಲ್ಲ.

ನಾವು ನಾಡ ಹಂಚಿನ ಮನೆಯಲ್ಲಿ ವಾಸ ಮಾಡುತ್ತಿದ್ದೇವೆ ಎಂದರೆ ಸರಿ. ಸದರಿ ಮನೆಯ ಪೂರ್ವ ದಿಕ್ಕಿನಲ್ಲಿ ಹೊಸಾರು ಇರುತ್ತದೆ ಎಂದರೆ ಸರಿ. ಸದರಿ ಹೊಸಾರು ವಾದಿಗಳ ಮನೆಯ ಕಡೆಗೆ ಇರುತ್ತದೆ ಎಂದರೆ ಸರಿ. ಸದರಿ ಹೊಸಾರು ನನಗೆ, 1 ನೇ ಪ್ರತಿವಾದಿ ಹಾಗೂ ಸಿದ್ದೇಗೌಡರವರಿಗೆ ಸೇರಿರುತ್ತದೆ. ಸದರಿ ಸಿದ್ದೇಗೌಡ ನನ್ನ ಚಿಕ್ಕಪ್ಪ ಆಗಿರುತ್ತಾರೆ. ನಮ್ಮ ಮತ್ತು 1 ನೇ ಪ್ರತಿವಾದಿಯ ಮನೆಯ ಹೊಸಾರಿನ ಒಟ್ಟು ವಿಸ್ತೀರ್ಣ ಪೂರ್ವ ಪಶ್ಚಿಮ 7 ½ ಅಡಿ ಹಾಗೂ ಉತ್ತರ ದಕ್ಷಿಣ 42 ಅಡಿ ಇರುತ್ತದೆ ಎಂದರೆ ಸಾಕ್ಷಿಯು ಸದರಿ ಮನೆಗೆ ಹೊಸಾರು ಇರುವುದಿಲ್ಲ, ಅದು ಮನೆಯ ಭಾಗ ಆಗಿರುತ್ತದೆ ಎಂದು ನುಡಿಯುತ್ತಾರೆ.

ಪ್ರತಿವಾದಪತ್ರವನ್ನು ಸಲ್ಲಿಸಲು ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿರುತ್ತೇನೆ. ಸದರಿ ಪ್ರತಿವಾದಪತ್ರದಲ್ಲಿ ಬರೆದಿರುವ ಅಂಶಗಳು ಸರಿ ಇರುತ್ತವೆ. ನಮ್ಮ ನಾಡಹಂಚಿನ ಮನೆಯ ವಿಸ್ತೀರ್ಣ ಪೂರ್ವ-ಪಶ್ಚಿಮ 46 ಅಡಿ, ಉತ್ತರ-ದಕ್ಷಿಣ 26 ಅಡಿ ಇರುತ್ತದೆ. 1 ನೇ ಪ್ರತಿವಾದಿಯ ಮನೆಯ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ವಾದಿ ಪರ ಶ್ರೀ **ಎಂ.ಡಿ** ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**